ತಿಳಿಯದಾದಳು. 'ದೇವರೇ' ಎಂದು ಮುಗ್ಧವಾಗಿ ಪ್ರಾರ್ಥಿಸುತ್ತಾ ಭಟ್ಟರ ಮನೆಗೆ ಹೋಗದೇ ತನ್ನ ಮನೆಯಲ್ಲಿ ಉಳಿದುಕೊಂಡಳು.

ಮೂರು ನಾಲ್ಕು ದಿನವೂ ಅವಳಲ್ಲಿ ಅದೇ ಲಕ್ಷಣಗಳು ಕಾಣಿಸಿಕೊಂಡಾಗ ಸೌಮ್ಯಳಿಗೆ ತಾನು ಖಂಡಿತ ಗರ್ಭಿಣಿ ಎನ್ನುವುದು ಮನವರಿಕೆಯಾಯಿತು. ಆಕೆ ಈ ಪಾಪದಿಂದ ಹೊರಬರುವುದು ಹೇಗೆ ಎಂದು ಕೇಳುವುದು ಯಾರನ್ನು? ಕಿವಿ ಕೇಳದ ಸರಿಯಾಗಿ ಕಣ್ಣೂ ಕಾಣದ ತನ್ನ ತಾಯಿಯನ್ನೇ? ಅಥವಾ ಗೋವಿಂದಭಟ್ಟರನ್ನೇ ಎನ್ನುವುದು ಆಕೆಗೆ ಹೊಳೆಯದಂತಾಯಿತು. ಆ ಚಿಂತೆಯಲ್ಲಿ ಮನೆಯಲ್ಲಿ ಹೆಣದ ಹಾಗೆ ಬಿದ್ದುಕೊಂಡ ಆಕೆ ಕೆರೆಯನ್ನೋ ಬಾವಿಯನ್ನೋ ನೋಡುವುದೇ ಸರಿ ಎಂಬಲ್ಲಿಗೆ ಬಂದಳು.

ಇದಾಗಿ ನಾಲ್ಕು ದಿನದ ಮೇಲೆ ಬೆಳಿಗ್ಗೆ ಹನ್ನೊಂದೂವರೆ ಗಂಟೆಯ ಸುಮಾರಿಗೆ ಸೌಮ್ಯಳ ಮನೆ ಮುಂದಿನ ದಾರಿಯಲ್ಲಿ ಪೇಟೆಯಾಚೆ ಹೋಗುತ್ತಿದ್ದ ಗೋವಿಂದ ಭಟ್ಟರಿಗೆ 'ಸೌಮ್ಯ ತಮ್ಮ ಮನೆಗೆ ಬಾರದಿರುವುದು ಯಾಕಿರಬಹುದು?' ಎನ್ನುವುದನ್ನು ವಿಚಾರಿಸಿ ಹೋಗಬೇಕೆನಿಸಿತು. ಅವರು ಸೌಮ್ಯಳ ಮನೆಯೊಳಗೆ ಕಾಲಿಡುವಾಗ ಮನೆ ಬಿಕೊಗುಡುತ್ತಿತ್ತು. ಚಾವಡಿಯಲ್ಲಿ ಯಾರೂ ಕಾಣಿಸಲಿಲ್ಲವೆಂದು ಆತಂಕಗೊಂಡ ಅವರು 'ಓಯೇ, ಯಾರು ಇಲ್ಲವೇ ಮನೆಯಲ್ಲಿ?' ಎಂದು ಸಣ್ಣಗೆ ಕೂಗಿದರು.

ಸೌಮ್ಯಳಿಗೆ ಹಾಗೆ ಕೂಗಿ ಕರೆದದ್ದು ಭಟ್ಟರೇ ಇರಬೇಕೆಂದು ಅನಿಸಿತು. ಆಕೆ ನಿಧಾನವಾಗಿ ಮಲಗಿದ್ದಲ್ಲಿಂದ ಎದ್ದು ಚಾವಡಿಗೆ ಬಂದಳು. 'ಸ್ವಾಮಿ ನನಗೆ ಸ್ವಲ್ಪ ಆರೋಗ್ಯ ಇಲ್ಲ' ಎಂದು ಕೈ ಮುಗಿದಳು.

ಭಟ್ಟರು 'ಏನು ಅನಾರೋಗ್ಯ? ಏನಾಗಿದೆ?' ಎಂದು ಸಹಜವಾಗಿಯೇ ಪ್ರಶ್ನಿಸಿದರು. ಸೌಮ್ಯಳಿಗೆ ಮಾತು ಬರಲಿಲ್ಲ. ಅವಳ ಕಣ್ಣಿನಲ್ಲಿ ನೀರು ಕಾಣಿಸಿಕೊಂಡಿತು. ಭಟ್ಟರು 'ಅರೇ ಏನಾಯಿತು ನಿನಗೆ?' ಎಂದು ಆತಂಕದಿಂದ ಪ್ರಶ್ನಿಸಿದರು. ಸೌಮ್ಯ ಬಿಕ್ಕಳಿಸುತ್ತಾ 'ನಾನು ತಾಯಿಯಾಗುತ್ತಿದ್ದೇನೆ' ಎಂದು ಹೇಳುತ್ತಾ ಕುಸಿದು ಕುಳಿತಳು. ಭಟ್ಟರು ಗಾಬರಿಯಾಗಿ ಅವಳ ಬಳಿ ಸಾರಿ, 'ಇಲ್ಲ ಸೌಮ್ಯ, ನೀನು ಹೆದರುವ ಅಗತ್ಯವಿಲ್ಲ' ಎಂದು ಹೇಳುತ್ತಾ ಅವಳನ್ನು ಎದೆಗೆ ಒರಗಿಸಿಕೊಂಡರು. ಸೌಮ್ಯ 'ನಿಜಕ್ಕೂ?' ಎಂದು ಅಳುತ್ತಲೇ ಪ್ರಶ್ನಿಸಿದಳು. 'ಹೌದು, ಖಂಡಿತವಾಗಿಯೂ ನಾನು ನಿನ್ನ ಕೈ ಬಿಡುವುದಿಲ್ಲ. ನಾನು ನಿನ್ನ ಹೊಟ್ಟೆಯಲ್ಲಿರುವ ಮಗುವಿನ ತಂದೆ ಎಂದು ಒಪ್ಪಿಕೊಳ್ಳುತ್ತೇನೆ, ಸಾಕೇ?' ಎಂದು ಸಂತೈಸಿದರು. ಸೌಮ್ಯ ಬಿಕ್ಕಳಿಸುವುದನ್ನು ನಿಲ್ಲಿಸಿ, 'ನೀವು ಅಷ್ಟು ಮಾಡಿದರೆ ಸಾಕು, ಇಲ್ಲವಾದರೆ ನಾನು ಕೆರೆಯನ್ನೋ ಬಾವಿಯನ್ನೋ ನೋಡಬೇಕಾಗುತ್ತದೆ' ಎಂದಳು. ಭಟ್ಟರು 'ಛೆ? ಅಂಥ ಮಾತು ಆಡಬೇಡ' ಎಂದು ಆಕೆಯಲ್ಲಿ ಧೈರ್ಯ ತುಂಬಿದರು.

ಮರುದಿನ ಸೌಮ್ಯ ಅಂಜುತ್ತಾ ಭಟ್ಟರ ಅಂಗಳಕ್ಕೆ ಕಾಲಿರಿಸುವಾಗ ಭಟ್ಟರು ಚಾವಡಿಯಲ್ಲಿ ಕುಳಿತು ಮೂಗಿಗೆ ನಶ್ಯ ಏರಿಸುತ್ತಿದ್ದರು. ಸೌಮ್ಯಳನ್ನು ಕಂಡವರೇ 'ಶಂಕರಿ' ಎಂದು ಹೆಂಡತಿಯನ್ನು ಕರೆದರು. ಶಂಕರಿ ಅಮ್ಮ 'ಏನು?' ಎನ್ನುವಂತೆ ಬಂದು ಚಾವಡಿಯಲ್ಲಿ ನಿಂತಾಗ, 'ನೋಡು, ಶಂಕರಿ ಸೌಮ್ಯ ಬಂದಿದ್ದಾಳೆ. ನಿನ್ನೆ ರಾತ್ರೆ ನಾನು ನಿನ್ನಲ್ಲಿ ಹೇಳಿದ್ದೆಲ್ಲ ನೆನಪುಂಟು ತಾನೇ? ಎಂದವರೇ 'ನಾನು ತೋಟದಾಚೆ ಹೋಗಿ ಬರುತ್ತೇನೆ' ಎಂದು ಮೇಲೆದ್ದರು.

ಶಂಕರಿ ಅಮ್ಮ ಸೌಮ್ಯಳನ್ನು ಒಳಗೆ ಕರೆಸಿಕೊಂಡು ಸುಮಾರು ಅರ್ಧಗಂಟೆಯಷ್ಟು ಹೊತ್ತು ಏನೂ ಆಡದೇ ಇದ್ದು, ಆಮೇಲೆ ಸಣ್ಣ ಸ್ವರದಲ್ಲಿ, 'ವಾಂತಿ ನಿಲ್ಲುವವರೆಗೆ ನೀನೇನು ಕೆಲಸ ಮಾಡುವುದು ಬೇಡ ಸೌಮ್ಯ. ಆದರೆ ಇಲ್ಲಿಗೆ ಬಾರದಿರಬೇಡ. ಸುಮ್ಮನೇ ಬಂದು ನನ್ನ ಕೋಣೆಯಲ್ಲೇ ಮಲಗು. ನಿನಗೆ ಬೇಕಾದದ್ದನ್ನು ಕೇಳಿ ಪಡೆದುಕೋ' ಎನ್ನುತ್ತಾ ಮಂಕು ಬಡಿದ ಹಾಗೆ ಕುಳಿತಿದ್ದ ಸೌಮ್ಯಳ ಬಳಿ ಬಂದು ತಲೆ ನೇವರಿಸಿದರು.

ಸೌಮ್ಯಳಿಗೆ ದುಃಖ ಒತ್ತರಿಸಿ ಬಂತು. ಆಕೆ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು. ತಕ್ಷಣ ಸೌಮ್ಯಳಿಗೆ ಸಾಂತ್ವನ ಹೇಳಲು ಮುಂದಾದ ಶಂಕರಿ ಅಮ್ಮ, 'ಹೀಗೆ ಅಳುವುದರಿಂದ ಏನೂ ಪ್ರಯೋಜನ ಸೌಮ್ಯ? ಹಾಗೆಂದು ನೀನಾಗಲೀ ನನ್ನ ಯಜಮಾನರಾಗಲೀ ತಪ್ಪು ಮಾಡಿದ್ದೀರಿ ಎಂದು ನನಗೆ ಅನಿಸುವುದೇ ಇಲ್ಲ. ನನ್ನ ಯಜಮಾನರು ನನ್ನ ತಿಳಿವಳಿಕೆಯಲ್ಲಿ ನನ್ನನ್ನು ಬಿಟ್ಟು ಬೇರೆ ಯಾವ ಹೆಣ್ಣನ್ನೂ ಸ್ಪರ್ಶಿಸಿದವರಲ್ಲ ಎಂಬ ನಂಬಿಕೆ ಮೊನ್ನೆ ಮೊನ್ನೆಯ ತನಕ ನನಗಿತ್ತು. ಈಗಲೂ ನಿನ್ನನ್ನು ಬಯಸಿ ಬೇಕಂತಲೇ ಅವರು ನಿನ್ನನ್ನು ಕೂಡಿದ್ದಾರೆ ಎಂದು ನನಗೆ ಅನಿಸುವುದಿಲ್ಲ' ಎಂದರು.

ಸೌಮ್ಯಳಿಗೆ ಈ ಶಂಕರಿ ಅಮ್ಮನಲ್ಲಿ ತನ್ನದೇ ತಪ್ಪು ಎಂಬ ಭಾವನೆ ಇರಬಹುದು ಎಂದುಕೊಂಡಳು. ಆಕೆ 'ನಾನು ಅವರನ್ನು ಮೋಹಿಸಲಿಲ್ಲ ಅಕ್ಕ. ಅವರನ್ನು ನೋಡುವಾಗಲೆಲ್ಲ ನನ್ನಲ್ಲಿ ಗೌರವ ಭಾವ ಇತ್ತೇ ವಿನಾ ತಪ್ಪಿಯೂ ನಿಮ್ಮ ದಾಂಪತ್ಯದಲ್ಲಿ ಮೂಗು ತೂರಿಸಬೇಕೆಂಬ ಬಯಕೆ ಮನಸ್ಸಿನಲ್ಲಿ ಇರಲಿಲ್ಲ' ಎಂದಳು.

ಶಂಕರಿ ಅಮ್ಮ ಗಂಭೀರವಾದರು. 'ಅದನ್ನೇ ನಾನೂ ಹೇಳುತ್ತಿರುವುದು ಸೌಮ್ಯ. ಈ ಪ್ರಕೃತಿಯಲ್ಲಿ ಏನಾಗಬೇಕೋ ಅದು ನಮ್ಮ ನಿರೀಕ್ಷೆಯನ್ನು ಮೀರಿ ಒಮ್ಮೊಮ್ಮೆ ಆಗುವುದಿದೆ. ನನ್ನಲ್ಲಿ ನನ್ನ ಯಜಮಾನರಿಗೆ ಮಕ್ಕಳಾಗಲಿಲ್ಲ. ಆದರೆ ನಿನ್ನಲ್ಲಾದರೂ ಮಕ್ಕಳಾಗಲಿ ಎಂಬ ಯೋಗ ಇತ್ತು ಎಂದು ತಿಳಿದುಕೊಳ್ಳೋಣ' ಎಂದರು.

ಇಬ್ಬರೂ ಈ ಮಾತನ್ನೇ ಮೆಲುಕು ಹಾಕುವಂತೆ ತುಂಬ ಹೊತ್ತು ಮೌನವಾದರು. ಸ್ವಲ್ಪ ಹೊತ್ತಿನ ಮೇಲೆ ಶಂಕರಿ ಅಮ್ಮನ ಔದಾರ್ಯ ನೋಡಿ ಸೌಮ್ಯಳ ಮನಸ್ಸು ಹಗುರವಾಯಿತು. ಆಕೆ ತನ್ನ ಬಳಿ ಕುಳಿತಿದ್ದ ಶಂಕರಿ ಅಮ್ಮನ ಬಳಿ ಸಾರಿ ಆಕೆಯನ್ನು ಬಿಗಿದಪ್ಪಿದಳು. 'ನೀವು ನನ್ನ ತಾಯಿ ಅಕ್ಕ. ನನ್ನ ಹೊಟ್ಟೆಯಲ್ಲಿರುವ ನಿಮ್ಮ ಯಜಮಾನರ ಮಗು ನನ್ನದಲ್ಲ, ನಿಮ್ಮದೇ!' ಎಂದಳು ಭಾವುಕಳಾಗಿ.

ಶಂಕರಿ ಅಮ್ಮ ನಿಧಾನವಾಗಿ ಸೌಮ್ಯಳ ಅಪ್ಪುಗೆಯನ್ನು ಬಿಡಿಸಿ, 'ನನ್ನ ಯಜಮಾನರೇ ಈ ವಿಷಯವನ್ನು ನಿನ್ನೆ ರಾತ್ರೆ ನನ್ನಲ್ಲಿ ಹೇಳಿ, 'ತಪ್ಪಿಯೂ ನಾನವಳನ್ನು ಬಯಸಿರಲಿಲ್ಲ. ಆದರೆ ಯಾಕೋ ಅವಳ ಮೇಲೆ ಒಂದು ರೀತಿಯಲ್ಲಿ ಹೇಳಲಾಗದ ಭಾವ ಆ ಮೊದಲೇ ನನ್ನಲ್ಲಿ ಇತ್ತು ಎಂದು ಈಗ ಹೊಳೆಯುತ್ತಿದೆ. ಅದು ದೇಹದ ಮೇಲಿನ ಪ್ರೀತಿಯಲ್ಲ. ಭಾವದ ಮೇಲಿನ ಪ್ರೀತಿ ಇರಬೇಕು. ಅಂಥ ಭಾವದ ಮೇಲಿನ ಪ್ರೀತಿಯನ್ನು ನನ್ನೊಳಗಿನ ರಾಕ್ಷಸ ಕೊಂದು ಹಾಕಿ ಅವಳ ದೇಹದ ಮೇಲೆ ಯಾಜಮಾನ್ಯ ಸ್ಥಾಪಿಸಿದ ಎನ್ನುವುದು ಮಹಾಪಾಪ ಎಂದು ಈಗ ನನಗೆ ಅನಿಸಿದೆ. ಅದು ತಪ್ಪಷ್ಟೇ ಅಲ್ಲ, ಕ್ರೌರ್ಯವೂ ಹೌದು' ಎಂದು ಆಡಿದ್ದರು ಎಂದು ಹೇಳಿದ ಶಂಕರಿ ಅಮ್ಮ, 'ನಮ್ಮ ಯಜಮಾನರು ನನ್ನನ್ನು ಉದ್ದೇಶಿಸಿ ನೋಡು ಶಂಕರಿ, ನಾನು ನಿನಗೆ ಭಾಷೆ ಕೊಡುತ್ತೇನೆ ಅಥವಾ ಯಾವ ದೇವರ ಮೇಲೆ ಆಣೆ ಮಾಡಿ ಹೇಳಬೇಕು ಎಂದು ಹೇಳು. ನಾನು ಮುಂದೆ ಯಾವತ್ತೂ ಅವಳನ್ನು ಭೋಗಿಸಲು ಇಚ್ಛಿಸುವುದಿಲ್ಲ. ಅಷ್ಟೇ ಅಲ್ಲ, ಆಕೆಯೂ ಮುಂದೆ ನನ್ನನ್ನು ತಪ್ಪಿಯೂ ಬಯಸುವುದಿಲ್ಲ ಎಂದು ನನ್ನ ಆತ್ಮಸಾಕ್ಷಿ ಹೇಳುತ್ತದೆ ಎಂದಿದ್ದರು' ಎಂದರು.

ಸೌಮ್ಯಳಿಗೆ ಭಟ್ಟರ ಕೋಮಲ ಹೃದಯ ಮತ್ತು ಕಠಿಣವಾದ ನಿರ್ಧಾರ ಕೇಳಿ ಆಶ್ಚರ್ಯವೂ ಆತಂಕವೂ ಆಯಿತು. ಇಂಥ ಒಂದು ನಿರ್ಧಾರವನ್ನು ಭಟ್ಟರು ಮಾತ್ರವಲ್ಲ, ಯಾವ ಗಂಡಸೂ ಮಹಾಭಾರತದ ಭೀಷ್ಮನ ಹಾಗೆ ಪಾಲಿಸಲು ಸಾಧ್ಯವೇ? ಎನ್ನುವುದು ಆಕೆಯಲ್ಲಿ ಆಶ್ಚರ್ಯ ಮೂಡಿಸಿತು. ನಾವು ಇಬ್ಬರೂ ಆ ಕ್ಷಣದಲ್ಲಿ ಅನುಭವಿಸಿದ ಸುಖವು ಮುಂದೆ ಯಾವತ್ತೂ ತನಗೆ ದೊರಕಲು ಸಾಧ್ಯವಿಲ್ಲ ಎನ್ನುವುದು ಆತಂಕವಾಗಿ ಅವಳ ಮುಂದೆ ಬಂತು.

ಅಂದಿನ ದಿನಗಳಲ್ಲಿ ಶ್ರೀಮಂತರೆನಿಸಿಕೊಂಡವರು ಅಥವಾ ದೈಹಿಕವಾಗಿ ಬಲಾಢ್ಯರಿದ್ದವರು, ಕೈ ಹಿಡಿದ ಹೆಂಡತಿ ಮನೆಯೊಳಗಿದ್ದರೂ ಇನ್ನೊಂದು ಹೆಣ್ಣನ್ನು ಇರಿಸಿಕೊಳ್ಳುವುದು ಘನಸ್ಥಿಕೆಯ ವಿಷಯ ಎಂಬಂತಿತ್ತು. ಆ ಕಾರಣದಿಂದ ರಾಜಾರೋಷವಾಗಿ ಹೆಣ್ಣಿನ ಮಾನಾಪಹರಣವಾದರೂ ಅದು ತಪ್ಪಲ್ಲ ಎನ್ನುವ ಭಾವ ಅಥವಾ ಹೆಣ್ಣು ಭೋಗದ ವಸ್ತು ಇಲ್ಲವೇ ತನ್ನ ಸ್ಥಿರಾಸ್ತಿಯ ಒಂದು ಭಾಗ ಎನ್ನುವಂತೆ ಜನ ಭಾವಿಸಿದ್ದರು.

ಈ ನಡುವೆ ಗೋವಿಂದ ಭಟ್ಟರ ಮತ್ತು ಸೌಮ್ಯಳ ಲೈಂಗಿಕ ಸಂಬಂಧವು ನಿಧಾನವಾಗಿ ಸಾರ್ವಜನಿಕವಾಗಿ ಬಹಿರಂಗವಾಯಿತು. ಆದರೆ ಅದು ಚರ್ಚೆಗೊಳಗಾಗುವ ವಿಷಯವಾಗದೆ ಜನರ ಬಾಯಿಯಲ್ಲಿ ನಾಲ್ಕು ದಿನ ಓಡಾಡಿ ಮತ್ತೆ ಇಲ್ಲದಂತಾಯಿತು. ಯಾರೋ ಅಲ್ಲಿ ಇಲ್ಲಿ ಒಬ್ಬಿಬ್ಬರು 'ಹಾಗಂತೆ', 'ಹೀಗಂತೆ' ಎನ್ನುವಂತೆ ಮಾತನಾಡುತ್ತಿದ್ದರೂ. ಹಲವರು 'ಅದರಲ್ಲೇನಿದೆ ವಿಶೇಷ? ಭಟ್ಟರಿಗೆ ಹೆಂಡತಿಯಲ್ಲಿ ಮಕ್ಕಳಾಗಲಿಲ್ಲ. ಈಗ ಇರಿಸಿಕೊಂಡವಳಾದರೂ ಹೆತ್ತುಕೊಡುತ್ತಾಳಲ್ಲ!' ಎಂಬ ಲೇವಡಿಯ ಮಾತುಗಳನ್ನೂ ಹೇಳಿದ್ದೂ ಇಲ್ಲದಿಲ್ಲ. ಆದರೂ ಅದು ನೀರಗುಳ್ಳೆಯ ಹಾಗೆ ಒಡೆದುಹೋಯಿತು.

ಸೌಮ್ಯ ಬಸುರಿಯ ಸಂಕಟವನ್ನು ಅನುಭವಿಸಿಕೊಂಡು ತಮ್ಮ ಮನೆಯ ಕೆಲಸ